ಬೆಂಗಳೂರು ರೇಸ್ ಕ್ಲಬ್ ಸ್ಥಳಾಂತರ

1914 (1720) ಶ್ರೀ ಕೆ.ಎಂ. ಕೃಷ್ಣಮೂರ್ತಿ (ಕಡೂರು): ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಬೆಂಗಳೂರು ಟರ್ಫ್ ಕ್ಲಬ್ ಸಂಸ್ಥೆಯ ಜಾಗದ ಲೀಸ್ ಅವಧಿ ಯಾವಾಗ ಮುಗಿದಿದೆ ಮತ್ತು ಲೀಸ್ ಒಪ್ಪಂದ ನವೀಕರಣಗೊಂಡಿದೆಯೆ;

ಆ. ರಾಜ್ಯ ಸರ್ಕಾರಕ್ಕೆ ರೇಸ್ ಕ್ಲಬ್‌ನಿಂದ ತೆರಿಗೆ ರೂಪದಲ್ಲಿ ಸಂದಾಯವಾಗುವ ವಾರ್ಷಿಕ ಆದಾಯವೆಷ್ಟು;

ಇ. ರೇಸ್ ವ್ಯವಹಾರವನ್ನು ಬೆಂಗಳೂರಿನ ಮಧ್ಯಭಾಗದಿಂದ ಹೊರವಲಯಕ್ಕೆ ಸ್ಥಳಾಂತರಿಸುವ ಬಗ್ಗೆ ಸರ್ಕಾರ ಏನು ಕ್ರಮ ಕೈಗೊಂಡಿದೆ?

ಶ್ರೀ ಎಸ್.ಎಂ. ಕೃಷ್ಣ (ಮುಖ್ಯ ಮಂತ್ರಿಗಳು)

ಅ. ಲೋಕೋಪಯೋಗಿ ಇಲಾಖೆಯು ಹೊರಡಿಸಿರುವ ಪರಿಷ್ಕೃತ ಆದೇಶ ಸಂಖ್ಯೆ: ಪಿಡಬ್ಲ್ಯುಡಿ 86 ಬಿಎಂಎಸ್ 98 ದಿನಾಂಕ: 5.9.2000ದ ಮೂಲಕ ಬೆಂಗಳೂರು ಟರ್ಫ್ ಕ್ಲಬ್ ಸಂಸ್ಥೆಯ ಜಾಗದ ಲೀಸ್ ಅವಧಿಯನ್ನು 20 ವರ್ಷಗಳ ಅವಧಿಗೆ ದಿನಾಂಕ: 1.1.89 ರಿಂದ 31.12.2009 ರವರೆಗೆ ನವೀಕರಣಗೊಳಿಸಲಾಗಿದೆ.

ಆ. ಸುಮಾರು ರೂ. 13.45 ಕೋಟಿಗಳು.

ಇ. ಸೂಕ್ತ ನಿವೇಶನಕ್ಕಾಗಿ ಪ್ರಯತ್ನಿಸಲಾಗುತ್ತಿದ್ದು, ಅದು ದೊರಕಿದ ತಕ್ಷಣ ಸ್ಥಳಾಂತರದ ಬಗ್ಗೆ ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು.

ತುರುವೇಕೆರೆ ತಾಲ್ಲೂಕಿಗೆ ಹೆಚ್ಚಿನ ಬಸ್ ಸಂಚಾರ

1916(2153) ಶ್ರೀ ಲಕ್ಷ್ಮೀನಾರಾಯಣ ಎಂ.ಡಿ. (ತುರುವೇಕೆರೆ): ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ತುರುವೇಕೆರೆ ತಾಲ್ಲೂಕಿನ ಗ್ರಾಮಾಂತರ ಪ್ರದೇಶಕ್ಕೆ ಬಸ್ ಸೌಕರ್ಯ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಆ. ಅನೇಕ ಹಳ್ಳಿಗಳಿಗೆ 3-4 ವರ್ಷಗಳಿಂದ ಬಸ್ ಸಂಚಾರ ಪ್ರಾರಂಭಿಸಲು ಜನರಿಂದ ನೂರಾರು ಅರ್ಜಿಗಳು ಬಂದರೂ ಸ್ಪಂದಿಸದಿರಲು ಕಾರಣವೇನು;

ಇ. ಬಸ್‌ಗಳು ಹಾಕಿದ್ದರೂ ಸರಿಯಾದ ವೇಳೆಗೆ ಬಸ್‌ಗಳನ್ನು ಓಡಿಸದಿರಲು ಕಾರಣ ಏನು;

ಈ. ಉನ್ನತ ಅಧಿಕಾರಿಗಳಿಂದ ಜನಸ್ಪಂದನ ಕಾರ್ಯಕ್ರಮ ಹಾಕಿಕೊಳ್ಳಲಾಗುವುದೇ;

ಉ. ಯಾವಾಗ ಹಾಕಿಕೊಳ್ಳಲಾಗುವುದು?

ಶ್ರೀ ಬಿ. ರಮಾನಾಥ ರೈ (ಸಾರಿಗೆ ಸಚಿವರು)

ಅ. ಇಲ್ಲ.

ಆ. 228 ಹಳ್ಳಿಗಳ ಪೈಕಿ ಸಂಚಾರಕ್ಕೆ ಅನಾನುಕೂಲವಾಗಿರುವ 9 ಹಳ್ಳಿಗಳನ್ನು ಹೊರತುಪಡಿಸಿ ಉಳಿದ ಹಳ್ಳಿಗಳಿಗೆ ಬಸ್ ಸೌಕರ್ಯವನ್ನು ಒದಗಿಸಲಾಗಿರುತ್ತೆ.

ಇ. ಸಂಚಾರಕ್ಕೆ ಅಸರ್ಮಪಕ ರಸ್ತೆಗಳಿಂದಾಗಿ ನಿಗದಿತ ಸಮಯಕ್ಕೆ ಬಸ್ ಓಡಿಸಲು ಸಾಧ್ಯವಾಗುತ್ತಿಲ್ಲ.